# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 46, ಜೆ.ಸಿ ನಗರ. ಬೆಂಗಳೂರು.

ಸಂಖ್ಯೆ: ಸ.ಅ/ವಾ-46/ಪಿ.ಆರ್/04/2020-21 ದಿನಾಂಕ:23-11-2020.

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/20-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ: 21-11-2020 ರಂದು ವಾರ್ಡ್ ನಂ:46 ಜೆ.ಸಿ.ನಗರದ ಸಿಟಿಜನ್ ಪಾರ್ಕ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

## ::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಎಸ್.ಜಿ.ರವೀಂದ್ರ. ಭಾ.ಆ.ಸೇ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ಯುವರಾಜ್.ಬಿ | ಸದಸ್ಯ ಕಾರ್ಯದರ್ಶಿ ವಾಡ್ ನಂ: 46 |
| 3. | ಡಾ.ಎಸ್.ಶ್ರೀದೇವಿ | ಆರೋಗ್ಯ ವೈಧ್ಯಾಧಿಕಾರಿಗಳು ವಾಡ್ ನಂ: 46 |
| 4. | ಹೆಚ್.ಮೂರ್ತಿ | ಕಂದಾಯ ವಸೂಲಿದಾರರು ವಾರ್ಡ್ ನಂ: 46 |
| 5. | ಗಣೇಶ್.ಕೆ.ಎನ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ:46 |
| 6. | ಸುವರ್ಣದೇವಿ | ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 7. | ಎಂ.ಚಂದ್ರಶೇಖರ್ | ಟ್ರಾಫಿಕ್ ಪಿ.ಎಸ್.ಐ |
| 8. | ಶಿವಾಜಿರಾವ್ | ಸಹಾಯಕ ಅಭಿಯಂತರರು (ಬೆಸ್ಕಾಂ) |
| 9. | ಶ್ರೀ ಮಹೇಂದ್ರ | ಮಾರ್ಷಲ್ |
| 10. | ಎನ್.ಶಿವಪ್ಪ | ಘನತ್ಯಾಜ್ಯ ಸೂಪ್ರವೈಸರ್ |
| 11. | ಮೂರ್ತಿ | ಬಿಡ್ಲ್ಯೂಎಸ್ಎಸ್ಬಿ |
| 12. | ಕೇತನ್ | ಅಸೆಸರ್ ಬಿಬಿಎಂಪಿ |
| 13. | ಗಣೇಶ್ | ಎ.ಎಸ್.ಐ ಟ್ರಾಫಿಕ್ ವಿಭಾಗ |
| 14. | ಬಿ.ಆರ್ ಕೃಷ್ಣಪ್ಪ | ಪಿ.ಎಸ್.ಐ ಟ್ರಾಫಿಕ್ ವಿಭಾಗ |
| 15. | ರಾಜು.ಎಂ | ಘನ ತ್ಯಾಜ್ಯ ಸೂಪ್ರವೈಸರ್ |
| 16. | ಹರೀಶ್ | ಸ್ಥಳಿಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ |

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ ನಂ:46 ರವರು ದಿನಾಂಕ : 21-11-2020 ರಂದು ಈ ಹಿಂದಿನ ಸಭೆಯಲ್ಲಿ ನಡೆದಂತ ವಿಷಯಗಳು ಹಾಗೂ ದೂರುಗಳ ಕುರಿತು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

- ಈ ಹಿಂದಿನ ಸಭೆಯಲ್ಲಿ ತಿಮ್ಮಯ್ಯ ಗಾರ್ಡನ್ 7ನೇ ಅಡ್ಡ ರಸ್ತೆಯ ನಿವಾಸಿಗಳಿಗೆ ನೀರಿನ ತೊಂದರೇ ತಿಳಿಸಿದರು, ಈಗಾಗಲೇ ಕ್ರಮ ವಹಿಸಲಾಗಿರುತ್ತದೆಂದು ಬಿಡ್ಲ್ಯೂಎಸ್ಎಸ್ಬಿ ಅಧಿಕಾರಿಗಳು ತಿಳಿಸಿದರು.

- ತಿಮ್ಮಯ್ಯ ಗಾರ್ಡನ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮರದ ಕೊಂಬೆಗಳು ವಿದ್ಯುತ್ ತಂತಿಮೇಲೆ ಚಾಚಿಕೊಂಡಿದ್ದು ಅದನ್ನು ತೆರೆವುಗೊಳಿಸಲು ಕೋರಿದರು, ಈಗಾಗಲೇ ತೆರೆವುಗೊಳಿಸಿರುವುದಾಗಿ ಬೆಸ್ಕಾಂ ಅಧಿಕಾರಿಗಳು ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿನ ಕಾಲೇಜುಗಳು ಈಗಾಗಲೆ ತೆರೆಯಲಾಗಿದ್ದು ವಿದ್ಯಾರ್ಥಿಗಳ ಆರೋಗ್ಯದ ಹಿತದೃಷ್ಠಿಯಿಂದ ಹೆಚ್ಚು ಕೋವಿಡ್-19 ಪರಿಕ್ಷೆ ಮಾಡಲು ಆರೋಗ್ಯ ವೈದ್ಯಾದಿಕರಿಗಳಿಗೆ ಸೂಚಿಸಲಾಯಿತು.
- 9ನೇ ಅಡ್ಡ ರಸ್ತೆ, ತಿಮ್ಮಯ್ಯ ಗಾರ್ಡನನ್ ನಿವಸಿಗಳು ಬಿಡ್ಬ್ಲೂಎಸ್ಎಸ್‌ಬಿ ನೀರಿನ ಪೈಪ್ಲೈನ್ ನಲ್ಲಿ ಸೋರಿಕೆ ಇರುವುದಾಗಿ ದೂರು ನೀಡಿದರು.
- ವಾರ್ಡ್ ವ್ಯಾಪತಿಯಲ್ಲಿನ ಬ್ಲಾಕ್‌ಸ್ಪಾಟ್‌ಗಳಲ್ಲಿ ಸಿ.ಸಿ ಕ್ಯಾಮೆರ ಅಳವಡಿಸಲಾಗಿದ್ದು, ಕಸ ಹಾಕುವವರ ಮೇಲೆ ಕ್ರಮ/ದಂಡ ವಿದಿಸಲು ಮಾರ್ಷಲ್ ರವರಿಗೆ ಸೂಚಿಸಲಾಯಿತು.
- 5ನೇ ಸಿ ಮುಖ್ಯ ರಸ್ತೆ, ರಲ್ಲಿನ ಬೇಕರಿಯಿಂದ ಹೊಗೆ ಹೊರಬರುತ್ತಿದ್ದು ಅದರ ನಿಯಂತ್ರಣಕ್ಕೆ ಕ್ರಮ ವಹಿಸುವ ಬಗ್ಗೆ ದೂರು ನೀಡಿದರು.
- ವಾರ್ಡ್ ವ್ಯಾಪ್ತಿಯಲ್ಲಿನ ಪಾರ್ಕ್ ಮತ್ತು ಸುತ್ತಮುತ್ತಲಿನ ಪಾದಚಾರಿ ಮಾರ್ಗಗಳಲ್ಲಿ ಔಷಧಿ ಸಿಂಪಡಿಸಲು ಆರೋಗ್ಯ ವೈದ್ಯಾಧಿಕಾರಿಗಳಿಗೆ ತಿಳಿಸಲಾಯಿತು.
- ವಾಹನಗಳನ್ನು ರಸ್ತೆ ಬದಿಯಲ್ಲಿ ಬಹಳ ದಿನಗಳಿಂದ ನಿಲ್ಲಿಸಿರುತ್ತಾರೆ ಅದರ ಬಗ್ಗೆ ಕ್ರಮ ವಹಿಸಲು ಟ್ರಾಫಿಕ್ ಅಧಿಕಾರಿಗಳಿಗೆ ತಿಳಿಸಲಾಯಿತು.
- ಬೀದಿ ದೀಪ ನಿರ್ವಹಣೆ ಸಮರ್ಪಕವಾಗಿ ಮಾಡಲು ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಲಾಯಿತು.
- ಹಸಿ ತ್ಯಾಜ್ಯ ಮತ್ತು ಒಣತ್ಯಾಜ್ಯ ಬೇರ್ಪಡಿಸಿ ನೀಡುವಂತೆ ಮತ್ತು ಕಸವಿಗಂಡನೆ ಬಗ್ಗೆ ಅರಿವು ಮೂಡಿಸಲು ಮುಂಜಾಗ್ರತ ಕ್ರಮ ವಹಿಸಲು ತಿಳಿಸಲಾಯಿತು.
- ಘನತ್ಯಾಜ್ಯ ನಿರ್ವಹಣೆಯಲ್ಲಿ ರ್‍ಯಾಂಕಿಂಗ್ ಕಡಿಮೆಯಾಗಿದ್ದು ರ್‍ಯಾಕಿಂಗ್ ಹೆಚ್ಚಿಸುವುದಕ್ಕೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.
- ಮಾಸ್ಕಕ್ಕೆ ದಂಡ ವಿದಿಸುವ ಸಂರ್ಧಬದಲ್ಲಿ ಮಾರ್ಷಲ್ ಮತ್ತು ಪೋಲೀಸ್ ಅಧಿಕಾರಿಗಳ ನಡುವೆ ಮಾತಿನ ಚಕಮುಖಿಯಾಗುತ್ತಿದ್ದು ಅದರ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| **ಕಾರ್ಯದರ್ಶಿಗಳು** | **-ಸಹಿ-** |
| **ಹಾಗೂ ಸಹಾಯಕ ಅಭಿಯಂತರರು** | **ಅಧ್ಯಕ್ಷರು** |
| **ವಾರ್ಡ್ ನಂ: 46, ಜೆ.ಸಿ.ನಗರ** | **ಹಾಗೂ ನೋಡಲ್ ಅಧಿಕಾರಿಗಳು** |
| | **ವಾರ್ಡ್ ನಂ: 46, ಜೆ.ಸಿ ನಗರ** |

<u>**ಪ್ರತಿಯನ್ನು:-**</u>

1. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಕಡತಕ್ಕೆ.